

ನಮ್ಮ ಕೆಟಗರಿಯವರೇ ಇದ್ದರೆ ಓಕೆ. ಇಲ್ಲದಿದ್ದರೆ ಅವರೊಂದು ನಂಬರ್‌ಗೆ, ನಾವೊಂದು ನಂಬರ್‌ಗೆ ರಿಮೋಟ್ ಅಥವಾ ರೆಗ್ಯುಲೇಟರ್ ತಿರುಗಿಸುತ್ತ ಕೆರೆ–ದಡ ಆಟ ಆಡುವುದಾಗುತ್ತದೆ. ಎಸಿ ಇದ್ದರಂತೂ, ಅದ್ಹೇಗೆ ಸೆಟ್ ಮಾಡಿದರೂ, ಅದರ ರಿಮೋಟ್ ಹಿಡಿದು ಟೆಂಪರೇಚರ್ ಅನ್ನು ಟೀವಿ ಚಾನಲ್‌ಗಳ ತರಹ ಪದೇ ಪದೇ ರಾತ್ರಿಯೆಲ್ಲ ಎದ್ದು ಬದಲಿಸುತ್ತಿರಬೇಕಾಗುತ್ತದೆ. ಕೆಲವೊಮ್ಮೆ ಕರೆಂಟು ಹೋಗಿ ಎಸಿ ನಿದ್ದೆಗೆ ಜಾರಿ, ಮಲಗಿದವರು ಗರಬಡಿದಂತೆ ಎದ್ದು, ಫ್ಯಾನು ಹಾಕಿ, ಕಿಟಕಿಗಳನ್ನೆಲ್ಲ ತೆರೆಯುವ ಕೆಲಸ ಮಾಡಬೇಕು. ಆಯಾ ಋತುಮಾನಕ್ಕೆ ತಕ್ಕಂತೆ, ಕಾಲಲ್ಲಿ ಬಿದ್ದಿರುವ ಚಾದರನ್ನು ಹೊದ್ದುಕೊಳ್ಳಲು, ಹೊದ್ದುಕೊಂಡ ಚಾದರನ್ನು ಮೂಲೆಗೆ ತಳ್ಳಲು ಏಳಲೇಬೇಕು.

ರಾತ್ರಿ ಹೊತ್ತು ಇದ್ದಕ್ಕಿದ್ದಂತೆ ವಿದ್ಯುತ್ ಕೈ ಕೊಟ್ಟು, ಎಸಿ ಕೋಮಾಕ್ಕೆ ಹೋದರೆ, ಎಲ್ಲ ಕಿಟಕಿಗಳಲ್ಲಿ ಹಣಕಿ ಹಾಕುತ್ತಾ, ಅಕ್ಕಪಕ್ಕದ ಮನೆಗಳಲ್ಲಿ ಕರೆಂಟು ಇದೆಯೋ, ಬೀದಿ ದೀಪಗಳು ಬೆಳಗುತ್ತಿವೆಯೋ ಇಲ್ಲವೋ ಎಂದು ಚೆಕ್ ಮಾಡುವ ಕೆಲಸ. ನಮ್ಮ ಮನೆಯಲ್ಲಿ ಮಾತ್ರ ಕೈ ಕೊಟ್ಟಿದೆಯೋ, ಇಡೀ ಊರಿಗೆ ಕೈ ಕೊಟ್ಟಿದೆಯೋ ಎಂದು ಕನ್ಫರ್ಮ್ ಮಾಡಿಕೊಳ್ಳದಿದ್ದರೆ ನಿದ್ದೆ ಹತ್ತುವುದಿಲ್ಲ. ಅಕಸ್ಮಾತ್ ನಮ್ಮ ಮನೆಯ ವಿದ್ಯುತ್ ಮಾತ್ರ ಕೈ ಕೊಟ್ಟಿದ್ದರೆ, ನೆಮ್ಮದಿಯಾಗಿ ಮಲಗಿರುವ ಇಡೀ ಬೀದಿಯ ಜನರ ಮೇಲೆಲ್ಲ ಹೊಟ್ಟೆಯುರಿ ಹತ್ತಿಕೊಳ್ಳುತ್ತದೆ. ಇಡೀ ಬೀದಿಯ ಕರೆಂಟ್ ತೆಗೆದಿದ್ದರೆ ಹಾಗೂ ಹೀಗೂ ನೆಮ್ಮದಿಯಾಗಿ ನಿದ್ದೆ ಮಾಡಬಹುದು.

ಕನಸುಗಳ ಹಾವಳಿಯಂತೂ ಕೇಳಲೇಬೇಡಿ. ಒಳ್ಳೆಯ ಕನಸುಗಳು ಬಿದ್ದಾಗ ಏಳುವ ಗೋಜಿಗೆ ಹೋಗದೆ, ನಮ್ಮ ಎಲಾಸ್ಟಿಕ್ ಧಾರಾವಾಹಿಗಳ ಹಾಗೆ ಮುಂಜಾನೆಯವರೆಗೂ ಸುಖಸ್ವಪ್ನದಲ್ಲೇ ತೇಲಾಡಬಹುದು. ಗ್ರಹಚಾರಕ್ಕೆ ದುಃಸ್ವಪ್ನಗಳದೇ ಮೇಲುಗೈ. ಅದೆಷ್ಟು ಸಲ ಬರೆದ ಪರೀಕ್ಷೆಯನ್ನೇ ಮತ್ತೆ ಮತ್ತೆ ಬರೆಯುತ್ತೇವೆಯೋ, ಕಲಿತ ಪಾಠಗಳೆಲ್ಲ ಮರೆತು ಹೋಗಿರುತ್ತೇವೆಯೋ, ಫೇಲಾಗಿ ಗಾಬರಿ ಬೀಳುತ್ತೇವೆಯೋ, ಹಾವಿನಿಂದ ಕಚ್ಚಿಸಿಕೊಳ್ಳುತ್ತೇವೆಯೋ, ಹಾವಿನಿಂದ, ನಾಯಿಯಿಂದ ತಪ್ಪಿಸಿಕೊಳ್ಳಲು ತೇಕುತ್ತ ವ್ಯರ್ಥ ಪ್ರಯತ್ನದ ರನ್ನಿಂಗ್ ರೇಸ್‌ನ ವೇಗದಲ್ಲಿ ಓಡುತ್ತಿರುತ್ತೇವೆಯೋ, ಎತ್ತರದ ಪ್ರದೇಶದಿಂದ ಹೈಜಂಪ್ ಮಾಡುತ್ತಿರುತ್ತೇವೆಯೋ, ಹಲ್ಲುಗಳು ಮುರಿದು ಗೋಳಾಡುತ್ತಿರುತ್ತೇವೆಯೋ, ಯಾರ್ಯಾರನ್ನೋ ಪರಲೋಕಕ್ಕೆ ಕಳಿಸಿ ಪರದಾಡುತ್ತಿರುತ್ತೇವೆಯೋ, ದೆವ್ವ ಭೂತಗಳ ಜೊತೆಗೆ ಭಯದಿಂದ ಕಾದಾಡುತ್ತಿರುತ್ತೇವೆಯೋ ಗೊತ್ತಿಲ್ಲ. ಬಹುತೇಕರಿಗೆ ಇವೇ ದುಃಸ್ವಪ್ನಗಳು ಹೆದರಿಸಿ, ಮೈಯೆಲ್ಲಾ ಬೆವರಿ, ಗಾಬರಿಯಿಂದ ಎದ್ದುಕೂತು ಸ್ವಲ್ಪ ಹೊತ್ತಿನಲ್ಲಿ ಹೊರಪ್ರಪಂಚಕ್ಕೆ ಮರಳುವುದಾಗುತ್ತದೆ.

ಐ... ನಾ ಪಾಸಾಗಿದೀನಿ, ಮದುವೆಯಾಗಿದೆ, ಮಕ್ಕಳೂ ಇದಾರೆ, ಹಲ್ಲು ಮುರಿದಿಲ್ಲ, ನಾಯಿ ಕಚ್ಚಿಲ್ಲ, ಅವರು ಸತ್ತಿಲ್ಲ, ಹಾವು ಬಂದಿಲ್ಲ ಎಂದೆಲ್ಲ ಖುಷಿಯಾಗಿ, ನಿದ್ದೆ ಹಾರಿಹೋದ ಬಗ್ಗೆ ಕಿಂಚಿತ್ತೂ ಬೇಸರವಿಲ್ಲದಂತೆ ಮತ್ತೆ ಹೊದ್ದು ಮಲಗುವುದಿದೆ. ಪಕ್ಕದಲ್ಲಿ ಗೊರಕೆ ಹೊಡೆಯುವವರೋ, ಹಲ್ಲು ಕಡಿಯುವವರೋ, ಪರಪರ ತುರಿಸಿಕೊಳ್ಳುವವರೋ ಮಲಗಿ, ಇಡೀ ಮಂಚವನ್ನೆಲ್ಲಾ ಶೇಕಿಂಗ್ ಮಾಡಿ ಎಬ್ಬಿಸುವವರಿಗೆ 'ಛಳೀರ್' ಎಂದು ಬಾರಿಸಿ, ನಿಯಂತ್ರಿಸುವ ಕೆಲಸ ರಾತ್ರಿ ಎರಡು ಮೂರು ಪಾಳಿಯಲ್ಲಿ ಮಾಡಬೇಕಾಗುತ್ತದೆ. ಕೆಲವೊಮ್ಮೆ ಮನೆಯ ಸುತ್ತ ಬೆಕ್ಕುಗಳ ಕಿರುಚಾಟ, ನಾಯಿಗಳ ಹೊಡೆದಾಟ, ಗೂರ್ಖಾ ಪೀಪಿ ಊದುತ್ತ, ಗೇಟು ಬಡಿಯುವ ಸಪ್ಪಳಕ್ಕೂ ಎಗರೆಗರಿ ಬಿದ್ದು ಮಲಗುವುದಿದೆ.



ಮತ್ತೂ ಕೆಲವು ಕಡೆ ರಾತ್ರಿ ಸೊಂಪಾಗಿ ನಿದ್ದೆ ಹತ್ತುವ ಸಮಯದಲ್ಲಿಯೇ ಕೊಳಾಯಿ ನೀರಿನ ಆಗಮನ. ಐದಾರು ದಿನಕ್ಕೊಮ್ಮೆ ಅಥವಾ ವಾರಕ್ಕೊಮ್ಮೆ ಬಿಡುವ ನೀರನ್ನು ಅದೆಂತಹ ಕುಂಭಕರ್ಣನ ನಿದ್ದೆಯಿದ್ದರೂ ಕೈಬಿಟ್ಟು ಹಿಡಿಯಲು ನಿಲ್ಲಬೇಕಾದ ಪರಿಸ್ಥಿತಿ ಇನ್ನೂ ಇದೆ. ಒಂದು ರೀತಿ ನೀರು ತುಂಬುವ ಹಬ್ಬ ಚಾಲೂ. ತಟತಟ ಶಬ್ದ ಕೇಳುತ್ತಿದ್ದಂತೆ, ವಟಗುಟ್ಟುತ್ತಲೇ ಎರಡ್ಮೂರು ತಾಸು, ಕಾಫೀ ಲೋಟದಿಂದ ಹಿಡಿದು, ಚೊಂಬು, ಕೊಡ, ಟ್ಯಾಂಕಿ, ಸಿಂಟೆಕ್ಸ್ ಎಲ್ಲದರ ಹೊಟ್ಟೆ ತುಂಬಿಸಿ, ವಾಷಿಂಗ್ ಮಶೀನ್ ಚಾಲೂ ಮಾಡಿ ಮಲಗುವ ಹೊತ್ತಿಗೆ ನೇಸರ ಎದ್ದಿರುತ್ತಾನೆ.

ಕೆಲವರಿಗೆ ನಿದ್ದೆ ಬರದಿದ್ದರೆ, ಪಕ್ಕದಲ್ಲಿ ಗೊರಕೆ ಹೊಡೆಯುವವರನ್ನು ಕಂಡಾಗ ಮತ್ಸರ ಉಕ್ಕುವುದಿದೆ. ಸುಮ್‌ಸುಮ್ನೆಯಾದರೂ ಅವರ ನಿದ್ದೆಯನ್ನು ಕೆಡಿಸಿದ ನಂತರ ತಾವು ಸುಖನಿದ್ದೆಗೆ ಜಾರುವುದಿದೆ. ಕೂಸಿನ ವಿಷಯದಲ್ಲಿ ಕಥೆ ಬೇರೆಯೇ ಬಿಡಿ. ತಾಯಿ ನಿದ್ದೆಯಲಿದ್ದಾಗ, ನಿಚ್ಚಳವಾಗಿ ಕಣ್ಣುಬಿಟ್ಟುಕೊಂಡು ಅತ್ತೋ, ಕೇಕೆ ಹಾಕಿಯೋ ಎಬ್ಬಿಸಿ, ಆಕೆಯ ನಿದ್ದೆ ಹಾರಿಹೋದಾಗ ನೆಮ್ಮದಿಯಿಂದ ಮಲಗುತ್ತವೆ. ಮುಂಜುಮುಂಜಾನೆ ಎಲ್ಲಿಗಾದರೂ ಹೊರಡುವ ಕೆಲಸವಿದ್ದು, ರಾತ್ರಿ ಇಡೀ ಮನೆಮಂದಿಯ ಮೊಬೈಲ್‌ಗಳಲ್ಲಿ, ಜೊತೆಗೆ ಟೇಬಲ್ ಅಲಾರಾಂಗಳಲ್ಲಿ ಸಮಯ ಸೆಟ್ ಮಾಡಿ ಮಲಗಿದರೂ ನೆಮ್ಮದಿಯಿರದೆ, ಎಲ್ಲ ಅಲಾರಾಂಗಳ ಮೇಲೂ ಅನುಮಾನ ಕಾಡಿ, ರಾತ್ರಿಯೆಲ್ಲ ಎದ್ದೆದ್ದು ಸಮಯ ನೋಡುವುದಾಗುತ್ತದೆ. ಬರಹಗಾರರದು ಮತ್ತೊಂದು ರೀತಿಯ ಫಜೀತಿ. ರಾತ್ರಿ ಗಾಢನಿದ್ರೆಯಿಂದ ಸಡನ್ ಆಗಿ ಎಚ್ಚರವಾದಾಗ ತಲೆಯಲ್ಲಿ ಕವನದ ಸಾಲುಗಳೋ, ಕಥೆಯ ಎಳೆಯೋ, ಲೇಖನದ ಸ್ವರೂಪವೋ ಹೀಗೆ ಏನಾದರೊಂದು ವಿಷಯ ನೊರೆಯಂತೆ ಬುರುಬುರು ಉಕ್ಕುಕ್ಕಿ ಬರುತ್ತಿರುತ್ತದೆ. ಅದನ್ನು ಆ ಕ್ಷಣಕ್ಕೇ ಹಿಡಿದು, ಆವಿಯಾಗಲು ಬಿಡದೆ, ನಿದೆಯನ್ನು ಪಕ್ಕಕ್ಕೆ ತಳ್ಳಿ, ಮೊಬೈಲ್‌ನಲ್ಲೋ, ಪೇಪರ್‌ನಲ್ಲೋ ಒಂದೆರಡು ಸಾಲುಗಳನ್ನು ದಾಖಲಿಸಿಯೇ ಮಲಗುವ ಲೇಖಕರಿದ್ದಾರೆ.

ಇದಕ್ಕೆ ಅಪವಾದವೆಂಬಂತೆ, ಅರ್ಧರಾತ್ರಿಯಲ್ಲಿ ಸಿದ್ಧಾರ್ಥ ಯಶೋಧೆಯನ್ನು, ನಳ ದಮಯಂತಿಯನ್ನು ಬಿಟ್ಟುಹೋದಾಗ, ಅದ್ಯಾಕೆ ಎಚ್ಚರವಾಗಲಿಲ್ಲವೋ ಎಂದು ಆ ಪಾತ್ರಗಳು ಅದೆಷ್ಟು ಹಳಹಳಿಸಿರಬಹುದು ಎನಿಸುತ್ತದೆ. ಅದೇ ರೀತಿ ಹಗಲಿನಲ್ಲಿಯೇ ಕರ್ಣ ತನ್ನ ತೊಡೆಯ ಮೇಲೆ ಮಲಗಿ ಗಾಢನಿದ್ರೆಯಲ್ಲಿದ್ದ ಗುರುಗಳನ್ನು, ಕೀಟ ತೊಡೆ ಕೊರೆಯುತ್ತಿದ್ದ ಹಾಗೆ ಎಚ್ಚರಿಸದೆ ಶಾಪಗ್ರಸ್ಥನಾದ ಅಲ್ಲವೇ?

ಅದೇನೇ ಇರಲಿ, ಪ್ರತಿದಿನ ಮನುಷ್ಯ ಬೆಳಿಗ್ಗೆ ನಿದ್ದೆಯಿಂದ ಎದ್ದಾಗ ಅದು ಅವನ ಪುನರ್ಜನ್ಮವಂತೆ. ರಾತ್ರಿಯೆಲ್ಲಾ ಆಗಾಗ ಏಳುವ, ಮತ್ತೆ ಹಾಸಿಗೆಗೆ ಬೀಳುವ ಲೆಕ್ಕ ಹಿಡಿದರೆ ಅದೆಷ್ಟು ಸಲ ಪುನರ್ಜನ್ಮ ಲಭಿಸುತ್ತದೆಯೋ ಅವರವರೇ ಲೆಕ್ಕ ಹಾಕಿಕೊಳ್ಳಬೇಕು... ಅಲ್ಲವೇ?

ಪ್ರತಿಕ್ರಿಯಿಸಿ: feedback@sudha.co.in